## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:712/2023

**ಸಾಕ್ಷಿಯನ್ನು ದಿಃ 25.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ದ್ಯಾವನಾಯಕ | ಸಿಡಬ್ಲ್ಯೂ:4 | ಪಿಡಬ್ಲ್ಯೂ:3 |
| ತಂದೆಯ ಹೆಸರು | ದ್ಯಾವನಾಯಕ | | |
| ವಯಸ್ಸು | 45 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಅಂದನಹಳ್ಳಿ ಗ್ರಾಮ,<br>ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಮಹಜರ್ ಮತ್ತು ನಕ್ಷೆಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ನಿಪಿ. 3 ಮತ್ತು 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 3(ಬಿ) ಮತ್ತು 4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿಃ 06.08.2023 ರಂದು ಅಂದನಹಳ್ಳಿ ಗೇಟ್ ಹತ್ತಿರ ಪೊಲೀಸರು ಬಂದು ಮಹಜರ್ ಮಾಡುತ್ತಿದ್ದು, ಚಿಕ್ಕಸ್ವಾಮಿ, ಶಿವ ಮತ್ತು ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತೇವೆ. ಮಹಜರ್ ಅನ್ನು 3 ರಿಂದ 3.30 ಗಂಟೆ ಮಾಡಿರುತ್ತಾರೆ. ಸ್ಥಳದಲ್ಲಿ ಟಿ.ವಿ.ಎಸ್ ಗಾಡಿ ಮತ್ತು ಗೂಡ್ಸ್ ಆಟೋವನ್ನು ಅಮಾನತ್ತು ಪಡಿಸಿಕೊಂಡರು. ಸದರಿ ಗೂಡ್ಸ್

ಆಟೋ ಮತ್ತು ಟಿ.ವಿ.ಎಸ್ ಗಾಡಿಯ ಪೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೆ ನಿಪಿ. 5 ರಿಂದ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಸ್.ಎಂ. ವಕೀಲರಿಂದಃ**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ಸ್ಥಳ ಮಹಜರ್ ಗೆ ಬರಬೇಕೆಂದು ಪೊಲೀಸರು ನನಗೆ ಯಾವುದೆ ನೊಟೀಸು ಕೊಟ್ಟಿಲ್ಲ. ಮಹಜರ್ ದಿನ ಸ್ಥಳಕ್ಕೆ ನಾವು 3 ಗಂಟೆಗೆ ಹೋಗಿರುತ್ತೇವೆ. ನಾನು ಹೋಗುವ ಮೊದಲು ಪೊಲೀಸರು ಸ್ಥಳಕ್ಕೆ ಬಂದಿದ್ದರು. ಸ್ಥಳ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಅಪಘಾತದ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಪೊಲೀಸರು ಹೇಳಿದ ಮೇರೆಗೆ ನಿಪಿ. 3 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮಹಜರ್ ಮಾಡಿದರು ಎಂದು ಹೇಳಿದ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಮೃತನ ಸಂಬಂಧಿಕರಿಗೆ ವಿಮೆ ಪರಿಹಾರ ಸಿಗಲಿ ಎಂದು ನಾನು ಮಹಜರ್ ದಿನ ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.